# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ



## ಕೆಂಡಸಂಪಿಗೆಯ ಘಮ, ಸುಖಸರ್ಪದ ಪೂತ್ಕಾರ

‘ಕೆಲವೊಂದು ನೆನಪುಗಳು ಗಾಸಿ ಮಾಡುತ್ತವೆ. ಹಾಗೆ ಭರಿಸುವ ಶಕ್ತಿಯೂ ಮನುಷ್ಯರಲ್ಲಿ ಅಂತರ್ಗತವಾಗಿರುತ್ತದೆ. ಗುಡ್ ನೈಟ್.’ ಸಮಾಧಾನಪಡಿಸುವವನಂತೆ ಹೇಳಿದ್ದೆ ನಾನು.

‘ಇನ್ನೊಂದು ಮಾತು...’ ಹತ್ತಿರ ಬಂದು ನನ್ನ ಕಿವಿಯಲ್ಲಿ ಗುಟ್ಟು ಹೇಳುವವನಂತೆ, ‘ಸಿಂಧು ಮೆನನ್‌ನ ನಿಮ್ಮ ಜೊತೆ ಮಲಗಲು ಕಳಿಸಿಕೊಡಲಾ, ನಿಮಗೆ ಒಬ್ಬರೇ ಮಲಗಲು ಭಯವಾಗುವುದಾದರೆ...’ ನಗುತ್ತಾ ಹೇಳಿದ್ದ.

‘ಹೇ ಹೇ ನನಗೆ ಅಂಥ ಭಯವೇನೂ ಇಲ್ಲ’ ಎಂದು ಗೆಸ್ಟ್ ಹೌಸ್ ಬಾಗಿಲು ಹಾಕಿಕೊಂಡವನಿಗೆ ಎದೆ ಕ್ಷಣ ಢವಗುಟ್ಟಿತ್ತು. ಆತನ ಮಾತುಗಳಲ್ಲಿನ ಅರ್ಥವನ್ನು ಭೇದಿಸಲು ಆ ಕ್ಷಣ ನನಗಾಗಿರಲಿಲ್ಲ. ಎಂಥದ್ದೋ ಅವ್ಯಕ್ತ ಭಯ ಆವರಿಸಿ ಹಾಸಿಗೆಯ ಮೇಲುರುಳಿದ್ದೆ. ಆಶ್ಚರ್ಯವೆಂದರೆ ದೇಹ ಹಗುರವಾದಂತೆನಿಸುತ್ತಿತ್ತು. ಕೆಂಪು ಜೀರೊ ಕ್ಯಾಂಡಲ್ ಬಲ್ಬು ಮಾತ್ರ ಉರಿಯುತ್ತಿತ್ತು. ಭಗವಾನ್ ಕುಟ್ಟಿಯ ಮಾತು ಕೇಳಿ ಸಿಂಧು ಮೆನನ್ನಳನ್ನು ಜೊತೆಗೆ ಮಲಗಿಸಿಕೊಳ್ಳಲು ಒಪ್ಪಿಕೊಳ್ಳಬೇಕಿತ್ತು ಅನ್ನಿಸಿತ್ತು ಕ್ಷಣ. ಆದರೂ ಇವರೆಲ್ಲರೂ ಸೇರಿ ಏನಾದರೂ ಬಲೆ ಹೆಣೆಯುತ್ತಿರಬಹುದೇ ಅನ್ನಿಸಿತು ಮರುಕ್ಷಣ.

ಭಾಗ–4

ಹೊರಗೆ ಸಣ್ಣದಾಗಿ ಮಳೆ ಶುರುವಾಗಿತ್ತು. ಮಂಪರು ಆವರಿಸುತ್ತಿತ್ತು. ಬಾಗಿಲು ತಟ್ಟಿದ ಸದ್ದು ಕೇಳಿ ಹಾಸಿಗೆಯ ಮೇಲೆ ಎದ್ದು ಕುಳಿತವನಿಗೆ ಭಯ ಆವರಿಸಿತ್ತು. ಕುಡಿದ ಮತ್ತಿನಲ್ಲಿ ಹರಟಲು ಮತ್ತೆ ಭಗವಾನ್ ಕುಟ್ಟಿಯೇನಾದರೂ ಬಂದಿರಬಹುದೇ ಎಂದುಕೊಂಡು ಎದ್ದು ಬಾಗಿಲು ತೆರೆದಿದ್ದೆ. ರಾತ್ರಿಯ ಪಾರದರ್ಶಕ ಉಡುಗೆಯನ್ನುಟ್ಟು ಅರುಂಧತಿ ಪಿಳ್ಳೈ ನಗುತ್ತಾ ನಿಂತಿದ್ದಳು! ಮುಡಿಯಲ್ಲಿ ಐದಾರು ಕೆಂಡಸಂಪಿಗೆ ಹೂಗಳ ಕುಚ್ಚನ್ನು ಮುಡಿದಿದ್ದಳು.

‘ನಿದ್ದೆ ಬರಲಿಲ್ವಾ?’ ಬಾಗಿಲಿನ ಚಿಲಕ ಹಾಕಿ ಮಂಚದ ಪಕ್ಕದಲ್ಲಿದ್ದ ಸೋಫಾದ ಮೇಲೆ ಕುಳಿತುಕೊಂಡಿದ್ದಳು. ಜೀರೊ ಕ್ಯಾಂಡಲ್ ಬಲ್ಬಿನ ಬೆಳಕಲ್ಲಿ ಅರುಂಧತಿ ಪಿಳ್ಳೈ ಅಪ್ಸರೆಯಂತೆ ಕಂಗೊಳಿಸುತ್ತಿದ್ದಳು. ನನ್ನ ಕಣ್ಣುಗಳು ಪಾರದರ್ಶಕ ಉಡುಪಿನೊಳಗಿನ ಅವಳ ದೇಹವನ್ನು ಪರಿಶೀಲಿಸುತ್ತಿದ್ದವು. ಕಣ್ಣು ಮನುಷ್ಯನ ಮನಸ್ಸಿನ ಬ್ಯಾಟರಿಯಿದ್ದಂತೆ.

‘ಇನ್ನೇನು ನಿದ್ದೆ ಆವರಿಸುತ್ತಿತ್ತು...’ ನಾನು ಮಂಚದ ಮೇಲಿನ ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಕುಳಿತುಕೊಳ್ಳುತ್ತಾ ಹೇಳಿದ್ದೆ. ಅವಳು ಮುಡಿದಿದ್ದ ಸಂಪಿಗೆಯ ಪರಿಮಳ ನನ್ನ ದೇಹದಲ್ಲಿ ಒಂದು ರೀತಿಯ ಸಂಚಲನವನ್ನು ಮೂಡಿಸಿತ್ತು. ‘ಇಲ್ಲಿ ರಾತ್ರಿಯನ್ನು ಒಂಟಿಯಾಗಿ ಕಳೆಯಲು ನಿಮಗೆ ಭಯವೇನೂ ಇಲ್ಲವಲ್ಲಾ. ಅಪ್ಪ ವಿಚಾರಿಸಲು ಹೇಳಿದರು. ಅತಿಥಿಗಳ ಬಗ್ಗೆ ಅಪ್ಪನಿಗೆ ಇನ್ನಿಲ್ಲದ ಕಳಕಳಿ’ ಅವಳು ಮಾತನಾಡುವಾಗ ತುಟಿಗಳು ಮನಮೋಹಕವಾಗಿ ಚಲಿಸುತ್ತಿದ್ದವು.

‘ಭಯವೇಕೆ ಇಂಥ ಬ್ಯೂಟಿಫುಲ್ ಎನ್ವಿರಾನ್‌ಮೆಂಟ್‌ನಲ್ಲಿ. ನಿಜಕ್ಕೂ ನಾನು ತುಂಬಾ ಕಂಫರ್ಟಬಲ್ಲಾಗಿಯೇ ಇದ್ದೀನಿ. ಜೊತೆಗೆ ನಿನ್ನಂಥ ಅಪ್ಸರೆಯ ಸಹವಾಸ...’ ಧೈರ್ಯದಿಂದ ಮನಸ್ಸಲ್ಲಿದ್ದದ್ದನ್ನು ಹೊರ ಹಾಕಿದ್ದೆ.

‘ಆತ್ಮಗಳ ಅಸ್ತಿತ್ವದ ಬಗ್ಗೆ ನಿಮಗೆ ನಂಬಿಕೆ ಇದೆಯಾ?’ ಇದ್ದಕ್ಕಿದ್ದಂತೆ ವಿಷಯದ ದಿಕ್ಕನ್ನು ಬದಲಾಯಿಸಿದ್ದಳು.

‘ನೀನು ಮೆಡಿಸಿನ್ ಓದಿದವಳು. ಆತ್ಮಗಳ ಬಗ್ಗೆ ನಂಬಿಕೆ ಇಲ್ಲದೇ ಇರಬಹುದು. ಆದರೆ ದೇಹ ಸದಾ ಸಕ್ರಿಯವಾಗಿರಬೇಕಾದರೆ ದೇಹದಲ್ಲಿ ಪ್ರಾಣವಾಯು ಇರಲೇಬೇಕು. ಬಹುಶಃ ಇದನ್ನೇ ನಾವು ಆತ್ಮ ಎಂದು ಕರೆಯಬಹುದು. ಆತ್ಮಕ್ಕೆ ಪರೀಕ್ಷಿಸುವ, ವಿಮರ್ಶಿಸುವ, ವಿಶ್ಲೇಷಿಸುವ